ಶ್ರೀ ಹೆಚ್. ವಿಶ್ವನಾಥ್.—ಬಿಟ್ಟು ಹೋಗಿರುವುದಕ್ಕೆ ಕಾರಣಗಳನ್ನು ಕೊಟ್ಟಿದ್ದೀರಿ. ಆದರೆ ತಾವು ಕೊಟ್ಟಿರತಕ್ಕ ಕಾರಣಗಳು ಬಹುಶಃ ಎಷ್ಟರಮಟ್ಟಿಗೆ ಸಮಂಜಸವಾಗಿವೆ ಎಂಬುದಕ್ಕೆ ಹೇಳುವುದಾದರೆ, ಮೈಸೂರು ನಗರದಲ್ಲಿ ಮಕ್ಕಳ ಆಸ್ಪತ್ರೆಯನ್ನು ತೆರೆಯುವುದಕ್ಕೆ ಮೂಲ ಕಾರಣರು ಮತ್ತು ಅಂತರಾಷ್ಟ್ರೀಯ ಖ್ಯಾತಿ ಪಡೆದಂತಹ ಶ್ರೀಮತಿ ಇಂದಿರಾ ಅಮಲ್ ಎಂಬುವವರು ರಾಜೀನಾಮೆ ಕೊಡುವುದಕ್ಕೆ ನಿಮ್ಮ ಅಧಿಕಾರಿಗಳು ಬಲವಂತ ಹೇರಿ ಅವರು ಕೊಟ್ಟಂತಹ ರಾಜೀನಾಮೆಯನ್ನು ಕೇವಲ ೪೮ ಗಂಟೆಗಳ ಕಾಲದಲ್ಲಿ ಅಂಗೀಕಾರ ಮಾಡಿರುವುದು ಸರ್ಕಾರಕ್ಕೆ ಗೊತ್ತಿದೆಯೆ ?

ಶ್ರೀ ಎಂ. ಮಲ್ಲಪ್ಪ.—ಹೌದು. ಅದಕ್ಕೆ ಕಾರಣಗಳು ಇವೆ. ಅವರಿಗೆ ಪ್ರಿನ್ಸಿಪಾಲರಾಗಿ ಪ್ರೊಮೋಷನ್ ಕೊಟ್ಟು ಹುಬ್ಬಳ್ಳಿಗೆ ಹಾಕಿದೆವು. ಅವರು ೩ ದಿನ ಕೆಲಸ ಮಾಡಿ ಅಲ್ಲಿಂದ ವಾಪಸ್ಸು ಬಂದರು ; ಒಂದು ವರ್ಷದವರೆಗೆ ಅಲ್ಲಿಗೆ ಹೋಗಲಿಲ್ಲ. ಪುನಃ ರೀಕನ್ಸಿಡರ್ ಮಾಡಿ ನನಗೆ ಮೈಸೂರಿಗೇ ಹಾಕಿಕೊಡಿ, ನಾನು ಪ್ರೊಪೆಸರ್ ಆಗಿಯೇ ಕೆಲಸ ಮಾಡುತ್ತೇನೆಂದು ಅವರೇ ಬಂದು ಕೇಳಿಕೊಂಡರು. ನಂತರ ಅವರು ರಾಜೀನಾಮೆ ಕೊಟ್ಟರು. ವಿಧಿ ಇಲ್ಲದೆ ರಾಜೀನಾಮೆಯನ್ನು ಅಂಗೀಕಾರ ಮಾಡಬೇಕಾಯಿತು. ಅಂಥವರ ಒಂದು ಸೇವೆ ಖಾಸಗೀ ರಂಗದಲ್ಲಿಯಾದರು ನಡೆದು ಪ್ರಯೋಜನ ಪಡೆದರೆ ಸಂತೋಷ.

ಶ್ರೀ ಬಿ. ಬಿ. ಚಿಮ್ಮಣಕಟ್ಟಿ.—ಅಂತ ಉತ್ತಮವಾದ ವೈದ್ಯರ ಸೇವೆಯನ್ನು ಪುನಃ ಪಡೆಯುವುದಕ್ಕೆ ಪ್ರಯತ್ನಿಸುತ್ತೀರಾ ?

ಶ್ರೀ ಎಂ. ಮಲ್ಲಪ್ಪ.—ಹೇಗೆ ಅದು ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು.—ಪ್ರಶ್ನೆ ನಂ.೮೮೩ ಗೆ ಮಾನ್ಯ ವ್ಯವಸಾಯ ಮಂತ್ರಿಗಳು ಉತ್ತರಿಸುತ್ತಾರೆ.

Supplyof water to Tumkur and Kunigal Taluk through Hemavathi left Bank Canal.

883. SRI D. T. MAYANNA (Huliyurdurga).—Will the Minister for Major, Medium Irrigation and Muzarai be pleased to state :-

(a) Whether it is not a fact that the preliminary survey has been conducted by ths Public Works Department ; in order to provide water for irrigation purporses from tha left bank channel of Hemavathi Project to Tumkur and Kunigal taluks in Tumkur Dist ;

(b) whether it is possible to provide water for irrigation purposes to the said taluks during this year only after executing said cheme ;

(c) if so, whether the Public Works Department contemplates to conduct the survey work in this behalf ?

SRI K. H. RANGANATH (Minister for Agriculture and Parlimentary Affairs on behalf of [SRI N. BASAVAIAH (Minister of State for Major)], Medium, Irrigation and Muzrai.

(a) Yes.

(b) The scheme has already been started and efforts would be made to provide water as early as possible.

(c) This quetion does not rise.

ಶ್ರೀ ಡಿ. ಟಿ. ಮಾಯಣ್ಣ.—ಮೊದಲನೇ ಪ್ರಶ್ನೆಗೆ ಹೌದು ಎಂದು ಹೇಳಿದ್ದೀರಿ. ಹಾಗಾದರೆ ತುಮಕೂರು ಮತ್ತು ಕುಣಿಗಲ್ ತಾಲ್ಲೂಕುಗಳಲ್ಲಿ ಎಷ್ಟು ಎಕರೆಗೆ ಪ್ರಿಲಿಮಿನರಿ ಸರ್ವೆಯಾಗಿದೆ ಎಂದು ಹೇಳುತ್ತೀರಾ ?

†ಶ್ರೀ ಕೆ. ಹೆಚ್. ರಂಗನಾಥ್.—ಒಟ್ಟಿನಲ್ಲಿ ಸರ್ವೆ ಆಗಿದೆ. ಎಷ್ಟು ಎಕರೆಗೆ ಆಗಿದೆ ಎಂಬುದು ಬೇಕಾದರೆ ಪ್ರತ್ಯೇಕವಾಗಿ ನೋಟಿಸ್ ಕಳುಹಿಸಬೆಕು.

ಶ್ರೀ ಡಿ. ಟಿ. ಮಾಯಣ್ಣ – ಸರ್ವೆ ಆಗಿದೆ ಎಂದ ಮೇಲೆ ಎಷ್ಟು ಎಕರೆಗೆ ಆಗಿದೆ, ಎಷ್ಟು ಎಕರೆಗೆ ನೀರು ಬರುತ್ತದೆಂದು ಹೇಳುವುದಕ್ಕಾಗುವುದಿಲ್ಲವೆ ?

ಅಧ್ಯಕ್ಷರು.—ನೋಟಿಸ್ ಬೇಕೆಂದ ಮೇಲೆ ಪ್ರತ್ಯೇಕವಾಗಿ ಪ್ರಶ್ನೆ ಕಳುಹಿಸಿ.

ಶ್ರೀ ಎಸ್ ಆರ್. ಬೊಮ್ಮಾಯಿ.—ವಿತ್‌ಹೋಲ್ಡ್ ಮಾಡಿದ್ದರೆ ಒಳ್ಳೆಯದಾಗುತ್ತಿತ್ತು. ಏಕೆಂದರೆ ಒಂದು ಪ್ರಶ್ನೆಗೆ ಉತ್ತರ ಕೊಟ್ಟ ಉಪಪ್ರಶ್ನೆಗೆ ನೋಟಿಸ್ ಬೇಕೆಂದರೆ ಹೇಗೆ ?

ಅಧ್ಯಕ್ಷರು.—ನಾನು ಏನು ಮಾಡಲಿ ಹೇಳಿ.

ಶ್ರೀ ಕೆ. ಹೆಚ್. ರಂಗನಾಥ್.—ಅದು ರೆಕಾರ್ಡ್‌ನಲ್ಲಿ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪ್ರಶ್ನೆಯನ್ನು ಕೇಳಿದಾಗ ಉತ್ತರವನ್ನು ತರಿಸಲಿಕ್ಕೆ ಸರ್ಕಾರಕ್ಕೆ ಎಷ್ಟೋ ಸಮಯ ಇರುತ್ತದೆ ; ಹಣ ಖರ್ಚಾಗುತ್ತದೆ. ಉಪಪ್ರಶ್ನೆಗೆ ಸರಿಯಾದ ರೆಕಾರ್ಡ್ ಬಾರದೆ ಹೋದರೆ ಅಂಥ ಪ್ರಶ್ನೆಯನ್ನು ಅಚ್ಚು ಹಾಕುವುದೇ ಬೇಡ.

ಶ್ರೀ ಕೆ. ಹೆಚ್. ರಂಗನಾಥ.—ಮಾನ್ಯ ಸದಸ್ಯರು ಏನು ಕೇಳಿದ್ದಾರೆ ಅದಕ್ಕೆ ಒಂದು ಪ್ರತ್ಯೇಕವಾಗಿ ಪ್ರಶ್ನೆ ಕಳುಹಿಸಲಿ ; ನಾನು ಮಾಹಿತಿಯನ್ನು ತರಿಸಿಕೊಡುತ್ತೇನೆ.

ಶ್ರೀ ಡಿ. ಟಿ. ಮಾಯಣ್ಣ.—ಕಣಿಗಲ್ ತಾಲ್ಲೂಕಿನ ಹುಲಿಯದುರ್ಗ ಹೋಬಳಿ ಬಹಳ ಹಿಂದುಳಿದಿದೆ. ಹೇಮಾವತಿ ಪ್ರಾಜೆಕ್ಟಿನ ಎಡದಂಡೆ ನಾಲೆಯಿಂದ ತುರುವೇಕೆರೆ, ತಿಪಟೂರು ತಾಲ್ಲೂಕುಗಳಿಗೆ ನೀರನ್ನೊದಗಿಸಬೇಕೆಂದು ಮಾಡಿದ್ದೀರಿ. ಪಕ್ಕದಲ್ಲೆ ಬಾಗೂರು ಕೂಡ ಬರುವುದು ರಿಂದ ಅದನ್ನೂ ಸೇರಿಸಿ ಚಾನಲ್ ಅನ್ನು ದೊಡ್ಡದು ಮಾಡಿ ಹುಲಿಯದುರ್ಗ ಹೋಬಳಿಯನ್ನು ತೆಗೆದು ಕೊಳ್ಳುವುದಕ್ಕಾಗುತ್ತದೆಯೆ ?

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಸದಸ್ಯರದ್ದು ವ್ಯಾಪಕವಾದ ಪ್ರಶ್ನೆ. ಆವರಿಗೆ ಮತ್ತು ಈ ಸಭೆಗೆ ಗೊತ್ತಿದ್ದ ಹಾಗೆ ೧೯೬೧ರಲ್ಲಿ ಹೇಮಾವತಿ ಪ್ರಾಜೆಕ್ಟ್ ಮಾಡುವಾಗ ೨೨ ಸಾವಿರ ಎಕರೆ ನಂತರ ಜಾಸ್ತಿಯಾಯಿತು. ಈಗ ಒಟ್ಟು ೭ ಲಕ್ಷ ಎಕರೆವರೆಗೆ ಹೋಗತಕ್ಕ ಪರಿಸ್ಥಿತಿಯಲ್ಲಿದೆ. ಈಗ ನಮಗೂ ಮತ್ತು ತಮಿಳ್ನಾಡಿಗೂ ಇನ್ನೂ ಒಪ್ಪಂದದ ವಿಚಾರ ಹಾಗೆ ಉಳಿದಿರತಕ್ಕದ್ದು ಮಾನ್ಯ ಸದಸ್ಯರಿಗೆ ಗೊತ್ತಿದೆ ಆದ್ದರಿಂದ, ಅದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡತಕ್ಕದ್ದು ಸಕ್ತವಲ್ಲ ಎಂದು ಹೇಳಬಯಸುತ್ತೇನೆ ಆದರೆ ಸರ್ಕಾರದ ಅಭಿಪ್ರಾಯ ಏನಿದೆ ಎಂದರೆ ಈಗಲೇ ಚಾನಲ್ ದೊಡ್ಡದು ಮಾಡಿ ತುಮಕೂರು ಜಿಲ್ಲೆಗೆ ಪೂರ್ಣವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು ಎಂದು. ಜೊತೆಗೆ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಕೂಡ ಬರಬೇಕೆಂಬ ದೃಷ್ಟಿಯಿಂದ ಚಾನಲ್ ಅನ್ನು ದೊಡ್ಡದು ಮಾಡಿ ಹೈ ಲೆವಲ್ ಕ್ಯಾನಲ್ ಮತ್ತು ರೈಟ್ ಬ್ಯಾಂಕ್ ಹೈ ಲೆವಲ್ ಕ್ಯಾನಲ್ ಆಗುವ ರೀತಿಯಲ್ಲಿ ಮಾಡಬೇಕೆಂದು ಈಗಾಗಲೇ ಯೋಚನೆ ಮಾಡಿದ್ದೇವೆ. ಆದ್ದರಿಂದ, ಆ ಬಗ್ಗೆ ಮಾನ್ಯ ಸದಸರಿಗೆ ಅಂಕಿ ಅಂಶಗಳು ಬೇಕಾದರೆ ಅಥವಾ ವಿಷಯವನ್ನು ಹೆಚ್ಚು ತಿಳಿದುಕೊಳ್ಳಬೇಕೆಂಬ ಅಪೇಕ್ಷೆ ಇದ್ದರೆ ಪತ್ರ ಬರೆದಾಗಲೀ ಅಥವಾ ಅಧಿಕಾರಿಗಳೊಡನೆ ಮಾತನಾಡಿ ತಿಳಿದುಕೊಳ್ಳಬಹುದು. ಏಕೆಂದರೆ ಇದನ್ನು ಹೆಚ್ಚಾಗಿ ಸಭೆಯ ಮೂಲಕ ಪ್ರಸ್ತಾಪ ಮಾಡಿದರೆ ರಾಜ್ಯದ ಹಿತಕ್ಕೆ ಧಕ್ಕೆ ಬರಬಹುದು.

೧೦-೦೦ ಎ. ಎಂ.

ಶ್ರೀ ಡಿ. ಟಿ. ಮಾಯಣ್ಣ.—ಸ್ವಾಮಿ, ಈಗ ವಿಶ್ವೇಶ್ವರಯ್ಯ ಕೆನಾಲ್‌ನಿಂದ ಹಿಡಿದು ಮದ್ದೂರ್ ತಾಲ್ಲೂಕಿನ ಉತ್ತರಭಾಗ ಮತ್ತು ಕಣಿಗಲ್ ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ಮಳೆ ಸಕಾಲಕ್ಕೆ ಬಾರದೇ ಆ ಪ್ರದೇಶ ಬಹಳ ಹಿಂದುಳಿದ ಬೆಂಗಾಡು ಪ್ರದೇಶವಾಗಿದೆ. ಈ ಚಾನಲ್‌ನಿಂದ ಆ ಪ್ರದೇಶಕ್ಕೆ ನೀರು ಹೋದರೆ ಆ ಪ್ರದೇಶದ ಜನರಿಗೆ ತುಂಬಾ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಅವರು ೧೫ ಮೈಲಿ ದೂರಕ್ಕೆ ಹೋಗಬೇಕಾಗುತ್ತದೆ ಆದ್ದರಿಂದ ಆ ಚಾನಲ್‌ನಿಂದ ನೀರು ಕೊಡುವುದಕ್ಕೆ ಸರ್ಕಾರದವರೇ ಮನಸ್ಸು ಮಾಡುತ್ತಾರೆಯೇ ?

ಶ್ರೀ ಕೆ. ಹೆಚ್. ರಂಗನಾಥ್.—ನಾನು ಈಗಾಗಲೇ ಹೇಳಿದಹಾಗೆ ೧೯೬೧ರಲ್ಲಿ ೭.೨ ಟಿ.ಎಂ.ಸಿ.ಎಫ್.ಟಿಯಷ್ಟು ನೀರನ್ನು ಉಪಯೋಗಿಸಬೇಕು ಎಂದು ಇತ್ತು ; ತದನಂತರ ೧೯೫೫ ಟಿ.ಎಂ.ಸಿ. ಎಫ್.ಟಿ. ಯಷ್ಟು ವಾಟರ್ ಉಪಯೋಗಿಸಬೇಕು ಎಂದಾಯಿತು ಆಮೇಲೆ ೩೪ ಟಿ.ಎಂ.ಸಿ.ಎಫ್.ಟಿ ಯಷ್ಟು ನೀರು ಉಪಯೋಗಿಸಬೇಕು ಎಂದು ಇದೆ. ಈ ಚಾನಲ್ ಮಾಡುವುದರಿಂದ ಹೆಚ್ಚು ನೀರು ಉಪಯೋಗ ಮಾಡಬೇಕು ಎಂಬ ಅಭಿಪ್ರಾಯ ಇದೆ. ನಮ್ಮ ಮತ್ತು ಅವರ ವಿಚಾರ ಏನಿದೆ. ಈಗಾಗಲೇ ನಾವು ಏನೊಂದು ಒಪ್ಪಂದಕ್ಕೆ ಬಂದಿದ್ದೇವೆ ಅದರಂತೆ ತಮಿಳುನಾಡಿನವರು ಅದನ್ನು ಕಾರ್ಯ ಗತ ಮಾಡುವುದರಲ್ಲಿ ವಿಫಲರಾಗಿರುವುದರಿಂದ ಅದು ಹಾಗೇ ಇದೆ. ಅದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಮಾನ್ಯ ಸದಸ್ಯರು ತುಮಕೂರು ಜಿಲ್ಲೆಯ ವಿಚಾರದಲ್ಲಿ ಮತ್ತು ಮದ್ದೂರಿನ ವಿಚಾರದಲ್ಲಿ ಹೇಳಿದರು. ವರುಣಾನಾಲೆಯ ಕಾರ್ಯ ಆದಮೇಲೆ ಅವರಿಗೇನೂ ತೊಂದರೆ ಆಗುವುದಿಲ್ಲ. ಈ ಸಭೆಯಲ್ಲಿ ಅದನ್ನೆಲ್ಲಾ ಸಂಪೂರ್ಣವಾಗಿ ಪ್ರಸ್ತಾಪ ಮಾಡುವುದಕ್ಕೆ ಬದಲಾಗಿ ಅಧಿ ಕಾರಿಗಳ ಜೊತೆಗೆ ಮತ್ತು ಮಾನ್ಯ ಮುಖ್ಯ ಮಂತ್ರಿಯವರ ಜೊತೆಗೆ ಪತ್ರವ್ಯವಹಾರ ಮಾಡಿ ಹೆಚ್ಚು ವಿಷಯಗಳನ್ನು ತಿಳಿದುಕೊಂಡರೆ ಒಳ್ಳೆಯದು.

Meetings of Land Tribunals to hear the grievances of Tenants.

723. SRI B. V. RAMACHANDRA REDDY (Varthur).—Will the Miinster for Revenue be pleased to state :-

(a) the normal period of the Sittings of the Land Tribunals for hearing the applications of the tenants ;

(b) since what period Bangalorre South taluk Land Tribunals is defunct ;

(c) whether action would be taken by the Government to see that the said Tribunal meets at proper intervals ?

SRI B. BASAVALINGAPPA (Minister for Revenue).—

(a) Land Tribunals meet eight times in a month at the rate of twice a week.

(b) As it was considered necessary to reconstitute the land tribunal the same was recostituted *vide* Notification No.RD 66 LRA 78 dated 7-3-79.

(c) Yes.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—ಸ್ವಾಮಿ ನನ ಪ್ರಶ್ನೆಗೆ ಉತ್ತರವಾಗಿ ವಾರಕ್ಕೆ ಎರಡು ಸಾರಿ, ತಿಂಗಳಿಗೆ ೮ ಸಾರಿ ಭೂನ್ಯಾಯ ಮಂಡಳಿಗಳು ಸಭೆ ಸೇರುತ್ತವೆ, ಎಂದು ತಾವು ಹೇಳಿದ್ದೀರಿ. ಕೆಲವು ಕಡೆ ವಾರಕ್ಕೆ ೫ ದಿವಸ ಮತ್ತು ತಿಂಗಳಿಗೆ ೨೦ ದಿವಸ ಸಭೆ ಸೇರಬೇಕು ಎಂದು ಹೇಳಿದ್ದೀರಿ. ಇದರಲ್ಲಿ ಯಾವುದು ಸರಿ, ಯಾವುದು ತಪ್ಪು ಎಂದು ಹೇಳುತ್ತೀರಾ ?

† ಶ್ರೀ ಬಿ. ಬಸವಲಿಂಗಪ್ಪ.—ಇದರಲ್ಲಿ ಎರಡೂ ಸರಿ ಇದೆ. ಮೊದಲನೆಯದಕ್ಕೆ ವಾರಕ್ಕೆ ೨ ಸಾರಿ ಸಭೆ ಸೇರಬೇಕು ಎಂದು ಹೇಳಿದ್ದೇವೆ. ಒಂದು ತಿಂಗಳ ಹಿಂದೆ ಹೊಸದಾಗಿ ನಾವು ಒಂದು ಹುಕುಂ ಮಾಡಿದ್ದೇವೆ. ಅದರ ಪ್ರಕಾರ ವಾರಕ್ಕೆ ೫ ಸಾರಿ ಸಭೆ ಮಾಡಬೇಕು ಎಂದು ನಿರ್ಣಯ ತೆಗೆದುಕೊಂಡು ಆದೇಶ ಕೊಟ್ಟಿದ್ದೇವೆ.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—ಸ್ವಾಮಿ, ನಾನು ಬೆಂಗಳೂರು ದಕ್ಷಿಣ ತಾಲೂಕಿನ ಭೂ ನ್ಯಾಯ ಮಂಡಲಿಯು ಕಳೆದ ಎಷ್ಟು ದಿನಗಳಿಂದ ಸ್ಥಗಿತಗೊಂಡಿದೆ ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ